# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.16/2025

Pw-01

Cw-02

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ ದೇವರಾಜ ಗುಂಡೇರ |
| ತಂದೆಃಗಂಡನ ಹೆಸರುಃ | ಶ್ರೀ ಶಿವಣ್ಣ |
| ವಯಸ್ಸುಃ | 47 ವರ್ಷ |
| ಉದ್ಯೋಗಃ | ಪಿಡಿಒ, ಕೋಡಿಯಾಲ-ಹೋಸಪೇಟೆ, ಗ್ರಾಮ ಪಂಚಾಯತಿ |
| ವಾಸ ಸ್ಥಳಃ | ಹರಿಹರ |

**ದಿನಾಂಕ:18.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಕಳೆದ 1½ ವರ್ಷಗಳಿಂದ ರಾಣೇಬೆನ್ನೂರು ತಾಲೂಕಿನ ಕೋಡಿಯಾಲ-ಹೊಸಪೇಟೆ ಗ್ರಾಮ ಪಂಚಾಯತಿಯಲ್ಲಿ ಪಿಡಿಒ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ದಿನಾಂಕಃ19.02.2025 ರಂದು ಕುಮಾರಪಟ್ಟಣ ಪೊಲೀಸರು ನಮ್ಮ ಕಚೇರಿಗೆ ಬಂದಿದ್ದರು. ಪಂಚನಾಮೆ ಮಾಡುವುದು ಇದೆ, ಆದ ಕಾರಣ ನೀವು ಪಂಚರಾಗಿ ಬರಬೇಕೆಂದು ಕೋರಿಕೊಂಡರು. ಅದರಂತೆ ನಾನು ಮತ್ತು ನಮ್ಮ ಪಂಚಾಯತಿ ಕಾರ್ಯದರ್ಶಿಗಳಾದ ಚಾಸಾ-3-ರಾಮಪ್ಪ ನಲ್ಲೂರು ಒಪ್ಪಿಕೊಂಡು ಪೊಲೀಸರ ಜೊತೆ ಹೋದೆವು.

2. ಪೊಲೀಸರು ನಮ್ಮಿಬ್ಬರನ್ನು ಕೋಡಿಯಾಲದ ಮಸೀದಿ ರಸ್ತೆಯಲ್ಲಿರುವ ಚಂದ್ರಪ್ಪ ಗೋಣೆಪ್ಪನವರ ಮನೆಗೆ ಕರೆದುಕೊಂಡು ಹೋದರು. ನಾವು ಮತ್ತು ಪೊಲೀಸರು ಸದರಿ ಮನೆಯ ಒಳಗೆ ಹೋದೆವು. ಆಗ ಸದರಿ ಮನೆಯವರು ಜಾಗವನ್ನು ತೋರಿಸಿದರು. ಆಗ ಪೊಲೀಸರು ಜಾಗ ಮತ್ತು ದಿಕ್ಕುಗಳನ್ನು ಪರಿಶೀಲಿಸಿ ಮನೆಯಲ್ಲಿದ್ದ ಐಶ್ವರ್ಯಾ ಎಂಬ ಹುಡುಗಿಯನ್ನು ಪೊಲೀಸರು ಎಲ್ಲಿ ಹೊಡೆದರು ಎಂದು ಕೇಳಿದರು. ಆಗ ಸದರಿ ಐಶ್ವರ್ಯಾ ಇವರು ತನಗೆ ಹೊಡೆದ ಜಾಗವನ್ನು ಪೊಲೀಸರಿಗೆ ತೋರಿಸಿದರು. ಆಗ ಪೊಲೀಸರು ಸ್ಥಳದಲ್ಲಿ

ಟೈಪ್ ಮಾಡಿಸಿ ಪಂಚನಾಮೆಗೆ ನಮ್ಮ ಸಹಿಗಳನ್ನು ಪಡೆದುಕೊಂಡರು. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–1 ಎಂದು, ನನ್ನ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಪೊಲೀಸರು ಪಂಚನಾಮೆ ಮಾಡುವ ಕಾಲಕ್ಕೆ ಪೋಟೋವನ್ನು ತೆಗೆದಿರುತ್ತಾರೆ. ಸದರಿ ಪೋಟೋವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 7 ನೇ ಆರೋಪಿತರ ಪರವಾಗಿ ಶ್ರೀ ಪಿ.ಸಿ.ಬಿ. ವಕೀಲರಿಂದಃ**

3. ಪೊಲೀಸರು ನನಗೆ ಯಾವುದೇ ನೋಟೀಸನ್ನು ನೀಡಿಲ್ಲ ಎಂದರೆ ನಿಜ. ಆ ದಿನ ನಾನು ಪಂಚನಾಮೆಗೆ ಒಂದು ಸಹಿ ಮಾಡಿರುತ್ತೇನೆ. ಸಹಿ ಮಾಡಿರುವ ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನಾನು ಹೇಳಬಲ್ಲೆ. ನಾನು ಸ್ಥಳ ಪಂಚನಾಮೆಗೆ ಹೋಗುವ ಸಲುವಾಗಿ ನಮ್ಮ ಕಚೇರಿಯಲ್ಲಿ ನಿರ್ವಹಣೆ ಮಾಡುವಂತಹ ಚಲನ–ವಲನ ವಹಿಯಲ್ಲಿ ನಮೂದು ಮಾಡಿಲ್ಲ ಮತ್ತು ಸಹಿ ಮಾಡಿಲ್ಲ. ಸ್ಥಳದ ಚಕ್ಕುಬಂಧಿಯನ್ನು ಹೇಳಬಲ್ಲೆ.

4. ನಾನು ಹೇಳಿದಂತೆ ಪೊಲೀಸರು ನಮ್ಮ ಕಚೇರಿಗೆ ಬಂದಿಲ್ಲ ಮತ್ತು ನನ್ನನ್ನು ಸ್ಥಳಕ್ಕೆ ಕರೆಸಿಲ್ಲ ಹಾಗೂ ನಮ್ಮ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಪೋಟೋ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಹೇಳಿದ ಮೇರೆಗೆ ನಾನು ಪೋಟೋ ತೆಗೆಸಿಕೊಳ್ಳಲು ನಿಂತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪಿರ್ಯಾದಿಗೆ ಸಹಾಯಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.